ಪ್ಲಾಸ್ಟಿಕ್ ಮರುಬಳಕೆ ಕುರಿತು ಶಾಲಾ ಮಕ್ಕಳಿಗೆ ಜಾಗೃತಿ

ಉದಯಕಾಲ ನ್ಯೂಸ್

ಬೆಂಗಳೂರು: ಸ್ವಚ್ಛ ಹಸಿರು ಮತ್ತು ಆರೋಗ್ಯಕರ ನಾಳೆಗೆ ಕೊಡುಗೆ ನೀಡುವ ಗುರಿಯೊಂದಿಗೆ ಐಟಿಸಿ ಸನ್‌ಫೀಸ್ಟ್ ಯಿಪ್ಪೀ ವೇ ಫಾರ್ ಲೈಫ್ ಸಹಯೋಗದೊಂದಿಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿತು. ಜೊತೆಗೆ, ಪ್ಲಾಸ್ಟಿಕ್‌ನಿಂದ ತಯಾರಿಸಿದ ಬೆಂಚು ಮತ್ತು ಮೇಜುಗಳನ್ನು ಸರ್ಕಾರಿ ಶಾಲೆಗಳಿಗೆ ವಿತರಿಸಲಾಯಿತು.

ವೈಟ್‌ಫೀಲ್ಡ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ಮೇಳದಲ್ಲಿ ಪ್ಲಾಸ್ಟಿಕ್ ಕುರಿತು ಜಾಗೃತಿ ಮೂಡಿಸಲಾಯಿತು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಹಾಗೂ ಅದರ ಮರುಬಳಕೆ ಮಾಡುವ ಬಗ್ಗೆ ವಿಜ್ಞಾನ ಮೇಳದಲ್ಲಿ ಪ್ರದರ್ಶನ ನೀಡಲಾಯಿತು.

ಸುಸ್ಥಿರತೆ ವಿಷಯಗಳ ಕುರಿತು ಕಲಾತ್ಮಕ ಅಭಿವ್ಯಕ್ತಿಯನ್ನು ಉತ್ತೇಜಿಸಲು ಚಿತ್ರಕಲಾ ಸ್ಪರ್ಧೆಯನ್ನು ಸಹ ಇದೇವೇಳೆ ಆಯೋಜಿಸಲಾಗಿತ್ತು. ಪರಿಸರ ಪ್ರಜ್ಞೆಯ ಉತ್ಪನ್ನಗಳನ್ನು ಉತ್ತೇಜಿಸುವ ಮೂಲಕ ವಿದ್ಯಾರ್ಥಿಗಳು ನಡೆಸುವ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಇದಲ್ಲದೆ ಮರುಬಳಕೆ ಪ್ಲಾಸ್ಟಿಕ್ ತ್ಯಾಜ್ಯದಿಂದ ತಯಾರಿಸಿದ 100 ಬೆಂಚುಗಳು ಮತ್ತು ಮೇಜುಗಳನ್ನು ಸಹ ಇದೇವೇಳೆ ವಿತರಿಸಲಾಯಿತು.

ಐಟಿಸಿ ಫುಡ್‌ನ ಸ್ನ್ಯಾಕ್ಸ್, ನೂಡಲ್ಸ್ ಮತ್ತು ಪಾಸ್ತಾದ ಸಿಒಒ ಕವಿತಾ ಚತುರ್ವೇದಿ ಮಾತನಾಡಿ, ಐಟಿಸಿಯ ಸುಸ್ಥಿರತೆ ಬದ್ಧತೆಗೆ ಅನುಗುಣವಾಗಿ ಯುವ ಮನಸ್ಸುಗಳಲ್ಲಿ ಪರಿಸರ ಜವಾಬ್ದಾರಿಯನ್ನು ತುಂಬಲು ಈ ಕ್ರಮ ಕೈಗೊಳ್ಳಲಾಗಿದೆ. ಸ್ವಚ್ಛ ಭವಿಷ್ಯಕ್ಕಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು,

2022 ರಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮವು ಇದುವರೆಗೂ ಭಾರತದ 4,000 ಶಾಲೆಗಳಲ್ಲಿ 21 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತ್ಯಾಜ್ಯ ನಿರ್ವಹಣೆಯ ಬಗ್ಗೆ ಅವರಿಗೆ ಶಿಕ್ಷಣ ನೀಡಿದೆ. ಅಷ್ಟೆ ಅಲ್ಲದೆ, 58,000 ಕೆಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ, ಮರುಬಳಕೆಯ ಪ್ಲಾಸ್ಟಿಕ್‌ನಿಂದ ತಯಾರಿಸಿದ 4000 ಕ್ಕೂ ಹೆಚ್ಚು ಮೇಜುಗಳು ಮತ್ತು ಬೆಂಚುಗಳನ್ನು ಸರ್ಕಾರಿ ಶಾಲೆಗಳಿಗೆ ವಿತರಣೆ ಮಾಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನ್ಯೂಟ್ರಿಷನ್ ಸೈನ್ಸಸ್ ಐಟಿಸಿ ಲಿಮಿಟೆಡ್ ಮುಖ್ಯಸ್ಥೆ ಡಾ. ಅಗಾಥಾ ಬೆಟ್ಸಿ, ಐಸಿಎಎಲ್ ಮಾಲೂರ್ ಐಟಿಸಿ ಲಿಮಿಟೆಡ್ ಮುಖ್ಯಸ್ಥರು ಮುತ್ತು ಕೃಷ್ಣ ಮೂರ್ತಿ, ಇಎಚ್‌ಎಸ್ ಮತ್ತು ಸಸ್ಟೈನಬಿಲಿಟಿ ಐಟಿಸಿ ಲಿಮಿಟೆಡ್ ಜಿಎಂ ಅನಂತ್ ಮಹೇಶ್ವರಿ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲಾ ಮುಖ್ಯಶಿಕ್ಷಕಿ ಎಚ್. ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ಅಂತರ್ಜಲ ಮರುಪೂರಣದ ಬಗ್ಗೆ ಜಲಮಂಡಳಿಯಿಂದ ಜನಜಾಗೃತಿ ಮೂಡಿಸುವ ಉದ್ದೇಶ

ಮಾ.21ರಂದು ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ

ಉದಯಕಾಲ ನ್ಯೂಸ್

ಬೆಂಗಳೂರು: ನಗರಕ್ಕೆ ನೀರು ಪೂರೈಸುವ ಕಾವೇರಿ ನದಿಗೆ ನಮನ ಸಲ್ಲಿಸುವ ಉದ್ದೇಶ ಮತ್ತು ನೀರಿನ ಉಳಿತಾಯ, ಸಂಸ್ಕರಿಸಿದ ನೀರಿನ ಮರು ಬಳಕೆ, ಅಂತರ್ಜಲ ಮರುಪೂರಣ ಹಾಗೂ ಮಳೆ ನೀರು ಕೊಯ್ಲು ಬಗ್ಗೆ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರ, ಬೆಂಗಳೂರು ಜಲಮಂಡಳಿ ಹಾಗೂ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರು ನಗರದಲ್ಲಿ ಕಾವೇರಿ ಆರತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಮಾರ್ಚ್ 21 ರ ಸಂಜೆ 6 ಗಂಟೆಗೆ ಸದಾಶಿವನಗರದಲ್ಲಿರುವ ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಆಯೋಜಿಸಲಾಗುತ್ತಿದ್ದು, ಇದೇ ವೇಳೆ ವಿಶ್ವ ಜಲ ಪ್ರತಿಜ್ಞೆ ಸ್ವೀಕಾರ ಅಭಿಯಾನವನ್ನೂ ಉದ್ಘಾಟಿಸಲಾಗುವುದು.

ಸ್ಯಾಂಕಿ ಕೆರೆ ಆವರಣದಲ್ಲಿ ಆರಂಭವಾದ ಕಾವೇರಿ ಆರತಿ ಕುರಿತ ಸಿದ್ಧತೆಗಳನ್ನು ಪರಿಶೀಲಿಸಿದ ಜಲ ಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ಕಾವೇರಿ ನದಿ ಶತಮಾನಗಳಿಂದ ಕರ್ನಾಟಕದ ಜೀವನಾಡಿಯಾಗಿದೆ.

ಬೆಂಗಳೂರು ನಗರ ಬೆಳೆಯುವಲ್ಲಿ ಮತ್ತು ನಗರಕ್ಕೆ ನೀರು ಪೂರೈಸುವಲ್ಲಿ ಕಾವೇರಿ ತಾಯಿ ಮಹತ್ವದ ಪಾತ್ರ ವಹಿಸುತ್ತಿದ್ದಾಳೆ. ಕಾವೇರಿ ತಾಯಿ ನೀರು ಮಾತ್ರವಲ್ಲದೆ, ರಾಜ್ಯದ ಜನರಿಗೆ ಅನ್ನ ಕೊಡುತ್ತಿದ್ದಾಳೆ. ನೀರಿನ ಲಭ್ಯತೆ ಹಾಗೂ ಸಮರ್ಪಕ ಬಳಕೆಯ ಬಗ್ಗೆ ಹಲವಾರು ಸವಾಲುಗಳು ಎದುರಾಗುತ್ತಿರುವ ಸಂಧರ್ಭದಲ್ಲಿ, ಈ ಅಮೂಲ್ಯ ಸಂಪತ್ತನ್ನು ಸಂರಕ್ಷಿಸುವುದು ಹಾಗೂ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಹಿನ್ನಲೆಯಲ್ಲಿ ಆಯೋಜಿಸಲಾಗಿರುವ ಕಾವೇರಿ ಆರತಿ ಕೇವಲ ಒಂದು ಕಾರ್ಯಕ್ರಮವಲ್ಲ, ಇದು ನೀರಿನ ಸಂರಕ್ಷಣೆ, ಸಮರ್ಪಕ ಬಳಕೆ, ಸುಸ್ಥಿರ ನೀರು ನಿರ್ವಹಣಾ ಪದ್ದತಿಗಳ ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕವಾಗಿ ಜಾಗೃತಿ ಮೂಡಿಸುವ ಒಂದು ಅಭಿಯಾನವಾಗಿದೆ ಎಂದರು.

ಈ ಅಭಿಯಾನದ ಮೂಲಕ ನಾವು ಸಾರ್ವಜನಿಕರಲ್ಲಿ ನೀರಿನ ಬಗೆಗಿನ ಅರಿವನ್ನು ಹೆಚ್ಚಿಸುವ ಉದ್ದೇಶ ಹೊಂದಿದ್ದೇವೆ. ನೀರು ಅಮೂಲ್ಯ ಹಾಗೂ ಪವಿತ್ರವಾದ ಸಂಪನ್ಮೂಲಗಳಲ್ಲೊಂದು. ಇದರ ಸಂರಕ್ಷಣೆ ಹಾಗೂ ಸಮರ್ಪಕ ಬಳಕೆಗೆ ನಮ್ಮ ದಿನನಿತ್ಯದ ಮನಃಸ್ಥಿತಿಯಲ್ಲಿ ಬದಲಾವಣೆಯ ಅಗತ್ಯವಿದೆ. ಕಾವೇರಿ ಆರತಿಯ ಮೂಲಕ ನಾವು ಈ ಅಮೂಲ್ಯ ಹಾಗೂ ಪವಿತ್ರ ಸಂಪನ್ಮೂಲವನ್ನು ಜವಾಬ್ದಾರಿಯುತವಾಗಿ ಬಳಸುವ ನಿಟ್ಟಿನಲ್ಲಿ ನಮ್ಮೆಲ್ಲರ ಕರ್ತವ್ಯದ ಬಗ್ಗೆ ಸಾಂಕೇತಿಕವಾಗಿ ಪ್ರೇರೇಪಿಸುವ ಕಾರ್ಯ ಮಾಡಲಿದ್ದೇವೆ.

ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕುಡಿಯಲು ಹೊರತುಪಡಿಸಿ ಇತರೆ ಉದ್ದೇಶಗಳಿಗಾಗಿ ಬಳಸುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡುವುದು, ಇದರಿಂದಾಗಿ ಸಿಹಿ ನೀರಿನ ಮೂಲಗಳ ಮೇಲಿನ ಹೊರೆಯನ್ನು ತಪ್ಪಿಸುವುದು ನಮ್ಮ ಗುರಿಯಾಗಿದೆ. ಅಲ್ಲದೇ, ನೀರು ಉಳಿತಾಯ ಹಾಗೂ ಸಮರ್ಪಕ ಬಳಕೆಯಲ್ಲಿ ಸಮುದಾಯವನ್ನು, ನೀತಿ ನಿರೂಪಕರು ಮತ್ತು ತಜ್ಞರನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವ ಮೂಲಕ ಜನಜಾಗೃತಿಯನ್ನು ಮೂಡಿಸುವುದು ನಮ್ಮ ಉದ್ದೇಶವಾಗಿದೆ. ಆಧುನಿಕ ಭವಿಷ್ಯದ ಸುಸ್ಥಿರ ಯೋಜನೆಗಳೊಂದಿಗೆ ಸಂಪ್ರದಾಯ ಕೆಲವು ಅಂಶಗಳನ್ನು ಅಳವಡಿಸಿಕೊಳ್ಳುವ ಕಾವೇರಿ ಆರತಿ ಕಾರ್ಯಕ್ರಮ ನಮ್ಮ ಸಂಸ್ಕೃತಿ ಹಾಗೂ ವೈಜ್ಞಾನಿಕ ನೀರಿನ ನಿರ್ವಹಣೆಯ ನಡುವಿನ ಸೇತುವೆಯಾಗಲಿದೆ. ಈ ಮೂಲಕ ಜಲ ಸುರಕ್ಷಿತ ನಗರವನ್ನು ನಿರ್ಮಿಸುವ ನಿಟ್ಟಿನಲ್ಲಿ ಪ್ರಮುಖ ಮೈಲಿಗಲ್ಲಾಗಲಿದೆ ಎಂದರು.

ಬೆಂಗಳೂರು ಜಲಮಂಡಳಿ 60 ವರ್ಷಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ ಆಯೋಜಿಸಿರುವ ವಜ್ರಮಹೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿನ ಒಂದು ವಿನೂತನ ಕಾರ್ಯಕ್ರಮ ಇದಾಗಿದೆ. ಈ ರೀತಿಯ ಕಾರ್ಯಕ್ರಮ ನಮ್ಮ ಜನರ ಧಾರ್ಮಿಕ ಭಾವನೆಗೆ ಒತ್ತು ನೀಡುವುದು ಹಾಗೆಯೇ, ನೀರಿನ ಉಳಿತಾಯ ಹಾಗೂ ಸಮರ್ಪಕ ಬಳಕೆಯ ಬಗ್ಗೆ ಜನ ಜಾಗೃತಿಯನ್ನು ಮೂಡಿಸುವುದಾಗಿದೆ ಎಂದರು.

ಕನಕಪುರ: ತಾಲೂಕು ಪಂಚಾಯಿತಿ ನೂತನ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸಿ.ಅವಿನಾಶ್ ಅಧಿಕಾರ ಸ್ವೀಕರಿಸಿದರು. ಈ ಹಿಂದೆ ಅಧಿಕಾರಿಯಾಗಿದ್ದ ವೀರಪ್ಪನವರ ವರ್ಗಾವಣೆಯಿಂದ ತೆರವಾಗಿದ್ದ ಸ್ಥಾನಕ್ಕೆ ಅವಿನಾಶ್ ಸೋಮವಾರ ಅಧಿಕಾರ ಸ್ವೀಕರಿಸಿದರು. ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಮೋಹನ್‌ಬಾಬು, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಶಿವಲಿಂಗೇಗೌಡ ಸೇರಿದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕರಿಗಳು ಹೂಗುಚ್ಚ ನೀಡಿ ಅಭಿನಂದಿಸಿದರು.

ಜಲಮಂಡಳಿಯಿಂದಲೇ ಟ್ಯಾಂಕರ್‌ನಲ್ಲಿ ನೀರು ಪೂರೈಕೆ

ಉದಯಕಾಲ ನ್ಯೂಸ್

ಬೆಂಗಳೂರು: ದುಬಾರಿ ಟ್ಯಾಂಕರ್ ನೀರು ಅವಲಂಬಿಸಿರುವವರಿಗೆ ಸಿಹಿಸುದ್ದಿ ನೀಡಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಿಂಗಳಾಂತ್ಯದಲ್ಲಿ ನೀವಿದ್ದಲ್ಲೇ ಮೊಬೈಲ್‌ನಲ್ಲಿ ಕಾವೇರಿ ನೀರು ಟ್ಯಾಂಕರ್ ಬುಕ್ ಮಾಡುವ ಅಪ್ಲಿಕೇಶನ್ ಜಾರಿ ಮಾಡಲು ಮುಂದಾಗಿದೆ.

ಬೇಸಿಗೆ ಶುರುವಾಗುತ್ತಲೇ ರಾಜ್ಯದ ಕೆಲ ಭಾಗದಲ್ಲಿ ನೀರಿಗಾಗಿ ಹಾಹಾಕಾರ ಹೆಚ್ಚಾಗಿದೆ. ಬೆಳಗಾಗುತ್ತಲೇ ನೀರಿಗಾಗಿ ಜಗಳ, ಕಿತ್ತಾಟ ಆಗಾಗ ಕಂಡುಬರುತ್ತಲೇ ಇದೆ. ಇನ್ನೂ ಕೆಲ ದಿನಗಳ ಹಿಂದೆ ಚಾಮರಾಜಪೇಟೆಯ ಆನಂದಪುರದ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಜರುಗಿತ್ತು. ಸುಡು ಬಿಸಿಲಿಗೆ ನೀರಿನ ಅಭಾವ ಇರುವ ಹಿನ್ನೆಲೆ ಟ್ಯಾಂಕರ್ ಅವಲಂಬಿಸಿಕೊಂಡು ದಿನನಿತ್ಯ ನೀರು ಬಳಕೆ ಮಾಡುವ ಜನರಿದ್ದಾರೆ. ಇದನ್ನೇ ಬಂಡವಾಳವನ್ನಾಗಿಸಿಕೊಂಡಿರುವ ಟ್ಯಾಂಕರ್ ಮಾಲೀಕರು ಹೆಚ್ಚೆಚ್ಚು ದರ ವಿಧಿಸಿ, ಸಾಮಾನ್ಯರ ಬಳಿ ಹಣ ಪೀಕುತ್ತಿದ್ದಾರೆ. ಹೀಗಾಗಿ ಟ್ಯಾಂಕರ್ ಮಾಫಿಯಾಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ, ಪೈಪ್‌ಲೈನ್ ಮುಖಾಂತರ ಕಾವೇರಿ ನೀರು ಪೂರೈಕೆಯಾಗದ ಪ್ರದೇಶದ ಜನರಿಗೆ ಜಲಮಂಡಲಿಯ ಹೊಸ ಅಪ್ಲಿಕೇಶನ್ ಪರಿಚಯಿಸಲು ಮುಂದಾಗಿದೆ.

ಟ್ಯಾಂಕರ್ ಬುಕ್ಕಿಂಗ್‌ಗೆ ಅವಕಾಶ: ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಅಣತಿಯಂತೆ ಈ ಹೊಸ ಯೋಜನೆ ಜಾರಿಗೆ ತರಲಾಗುತ್ತಿದೆ. ಜಲಮಂಡಳಿ ವೆಬ್‌ಸೈಟ್‌ನಲ್ಲಿ ಬುಕ್ಕಿಂಗ್ ಅಪ್ಲಿಕೇಶನ್‌ನ ಲಿಂಕ್ ದೊರೆಯಲಿದೆ. ಟ್ಯಾಂಕರ್ ನೀರಿಗಾಗಿ ಬುಕಿಂಗ್ ವ್ಯವಸ್ಥೆ ಇರಲಿದೆ. ಬೆಂಗಳೂರು ವ್ಯಾಪ್ತಿ ನೀರು ಒದಗಿಸಲು 200 ಟ್ಯಾಂಕರ್ ಜಿಪಿಎಸ್ ಆಧಾರಿತ ಟ್ಯಾಂಕರ್ ಕೊಂಡುಕೊಳ್ಳಲಾಗಿದೆ.

ಜೊತೆಗೆ ನೀವು ಕಾಯ್ದಿರಿಸಿದ ಟ್ಯಾಂಕರ್ ಎಲ್ಲಿದೆ ಎಂದು ಓಲಾ ಉಬರ್ ಆಟೋಗಳಂತೆ ಟ್ರ್ಯಾಕ್ ಮಾಡಬಹುದಾಗಿದೆ.

ಏನೆಲ್ಲ ವಿಶೇಷತೆ ಇದೆ:

ಮೊದಲಿಗೆ ನೀರಿಗಾಗಿ ಟ್ಯಾಂಕರ್ ಬುಕ್ ಮಾಡಿದ ತಕ್ಷಣ ಗ್ರಾಹಕನಿಗೆ ಒನ್ ಟೈಂ ಪಾಸ್‌ವರ್ಡ್ (ಓಟಿಪಿ) ಬರುತ್ತದೆ. ಅದನ್ನು ಚಾಲಕನಿಗೆ ತಿಳಿಸಬೇಕು. ಓಟಿಪಿ ಜನರೇಟ್ ಆದ ನಂತರವಷ್ಟೇ ನೀರು ಪೂರೈಕೆ ಮುಂದಿನ ಪ್ರಕ್ರಿಯೆ ಶುರುವಾಗುತ್ತದೆ. ಟ್ಯಾಂಕರ್‌ನಲ್ಲಿ ಎನೇಬಲ್ಡ್ ಆಟೋಮ್ಯಾಟಿಕ್ ರೇಡಿಯೋ ಫ್ರಿಕ್ವೆನ್ಸಿ ಐಡೆಂಟಿಫಿಕೇಶನ್(ಆರ್‌ಎಫ್‌ಐಡಿ) ಅಳವಡಿಸಿದ್ದು, ನೀರು ಟ್ಯಾಂಕರ್‌ಗೆ ಎಷ್ಟು ತುಂಬಬೇಕು ಎನ್ನುವುದನ್ನು ಅಂದಾಜಿಸುವ ವಿಶೇಷತೆಯನ್ನು ಹೊಂದಿದೆ. ಆ ಮಾದರಿಯಲ್ಲೇ ಅಪ್ಲಿಕೇಶನ್ ಅಭಿವೃದ್ಧಿ ಪಡಿಸಲಾಗಿದೆ.

ಡಿಜಿಟಲ್ ಪೇ: ಟ್ಯಾಂಕರ್ ನೀರು ಪೂರೈಕೆಯಾಗುವುದು ಖಚಿತಗೊಂಡ ನಂತರ ಆನ್‌ಲೈನ್‌ನಲ್ಲೇ ಎಷ್ಟು ಹಣ ಪಾವತಿಸಬೇಕು ಎಂಬ ಮಾಹಿತಿ ಒದಗಿಸಲಾಗುತ್ತದೆ. ಡಿಜಿಟಲ್ ರೂಪದಲ್ಲೇ ನೇರವಾಗಿ ಜಲಮಂಡಳಿಗೆ ಪೇ ಮಾಡಬಹುದಾಗಿದೆ. ಜೊತೆಗೆ ಗ್ರಾಹಕನ ನಿಖರವಾದ ವಿಳಾಸ ಅಪ್ಲಿಕೇಶನ್‌ನಲ್ಲಿ ತುಂಬುವ ಅವಕಾಶ ಇರಲಿದೆ. ಮಾರ್ಚ್ ತಿಂಗಳಾಂತ್ಯದಲ್ಲಿ ಜನ ಸಾಮಾನ್ಯರ ಬಳಕಗೆ ಸಿಗಲಿದೆ ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ಹೇಳಿದರು.

ಕ್ಲಿಕ್ಸ್ ಕ್ಯಾಪಿಟಲ್ ಸರ್ವಿಸಸ್ ಪ್ರೈ. ಲಿ.,

ನೋಂದಾಯಿತ ಕಚೇರಿ: ಅಗರ್‌ವಾಲ್ ಕಾರ್ಪೊರೇಟ್ ಟವರ್, ಹ್ಯೂಟ್ ನಂ. 23 5ನೇ ಮಹಡಿ, ಗೋವಿಂದ್ ಲಾಲ್ ಸಿಕ್ಕ ಮಾರ್ಗ್, ರಾಜೇಂದ್ರ ಪ್ಲೇಸ್, ನವದೆಹಲಿ-110008

"ಅಪೆಂಡಿಕ್ಸ್-IV-ಎ"[ಪ್ರೊವಿಸೊ ನಿಯಮ 8(6)ನ್ನು ನೋಡಿ]
ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ರ ಪ್ರೊವಿಸೊ ನಿಯಮ 8(6) ರ ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿ ಸೂಚನೆ.
ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಕ್ಲಿಕ್ಸ್ ಕ್ಯಾಪಿಟಲ್ ಸರ್ವಿಸಸ್ ಪ್ರೈ. ಲಿ., (ಕ್ಲಿಕ್ಸ್) (ಹೂರಕ ಭದ್ರತಾ ದಾರರು) ಇದರ ಅಧಿಕೃತ ಅಧಿಕಾರಿ, ಕ್ಲಿಕ್ಸ್ ಕ್ಯಾಪಿಟಲ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಇವರು ಹೂರಕ ಭದ್ರತಾದಾರರಾಗಿ ಸ್ವಾಧೀನಪಡಿಸಿಕೊಂಡಿದ್ದು, ಅದನ್ನು "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ", "ಎಲ್ಲಿದೆಯೋ ಹಾಗೆ" 17.04.2025 ರಂದು ಈ ಕೆಳಗೆ ವಿವರಿಸಿರುವ ಬಾಕಿ ಮೊತ್ತವನ್ನು ಈ ಕೆಳಗಿನ ಸಾಲಗಾರರು, ಜಾಮೀನುದಾರರು ಮತ್ತು ಹಾಹೂರೇಟ್ ಜಾಮೀನುದಾರರು ಇವರಿಂದ ವಸೂಲಾತಿಗಾಗಿ ಮಾರಾಟ ಮಾಡಲಿರುವರು. ಮೀಸಲು ಬೆಲೆ ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗೆ ಕ್ರಮವಾಗಿ ನೀಡಲಾಗಿದೆ.

ಸಾಲಗಾರರ, ಸಹ-ಸಾಲಗಾರರ/ ಜಾಮೀನುದಾರರ ಹೆಸರು ಮತ್ತು ವಿಳಾಸ	ಆಸ್ತಿಯ ವಿವರ ಮತ್ತು ಮಾಲೀಕರು
1. ಸುನೀಲ್ ರಾಯ್ಕರ್ ಬಿನ್ ಜ್ಞಾನೇಶ್ವರ್ ಸುಬ್ರಾಯ್ ರಾಯ್ಕರ್, ನಂ. ಇಡಿ-36, ಕಾಮಾಕ್ಷಿ ಕೃಷ್ಣಾ, 1ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಹಳೆ ಗಂಗಮ್ಮ ದೇವಾಲಯ ಬೀದಿ ಹತ್ತಿರ, ಗಂಗಾನಗರ, ಬೆಂಗಳೂರು ಉತ್ತರ, ಆರ್ ಟಿ ನಗರ, ಬೆಂಗಳೂರು, ಕರ್ನಾಟಕ-560032. 2. ರಾಮದಾಸ್ ವೈಕುಂಠ್ ರಾಯ್ಕರ್, ಬಿನ್ ವೈಕುಂಠ್ ರಾಯ್ಕರ್, #97, ಶಿರಸಿ ಹುಬ್ಬಳ್ಳಿ ರಸ್ತೆ, ಕವಲಕೊಪ್ಪ, ಮುಂಡಗೋಡ, ಕವಲಕೊಪ್ಪ, ಚಿಗಳ್ಳಿ, ಉತ್ತರ ಕನ್ನಡ, ಕರ್ನಾಟಕ - 581349. 3. ಶಿಲ್ಪಾಮಣಿ ಬಿನ್ ಚಿನ್ನತಂಬಿ, ನಂ. 3, 3ನೇ ಕ್ರಾಸ್, ಸಿತಾಪ್ಪ ಲೇಔಟ್, ನೀಲಸಂದ್ರದ ಪೂರ್ವ ದೇವಾಲಯ ಚಾಮುಂಡಿ ನಗರ, ಬೆಂಗಳೂರು-560032. 4. ಸಾಯಿ ರಾಯ್ಕರ್ ಕ್ಯಾಪಿಟಲ್, ನಂ. ಇಡಿ-36, ಕಾಮಾಕ್ಷಿ ಕೃಷ್ಣಾ, 1ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಹಳೆ ಗಂಗಮ್ಮ ದೇವಾಲಯ ಬೀದಿ ಹತ್ತಿರ, ಗಂಗಾನಗರ, ಬೆಂಗಳೂರು ಉತ್ತರ, ಆರ್ ಟಿ ನಗರ, ಬೆಂಗಳೂರು, ಕರ್ನಾಟಕ-560032. ಸಾಲದ ಸಂಖ್ಯೆ : SBLHLM0000122149, SBLHLM000003500396 (ಜೊತೆಗೆ 13.02.2024ರ ನಂತರ ಸೇರಿರುವ ಮುಂದುವರಿದ ಬಡ್ಡಿ ಮತ್ತು ದರಗಳು ಹಣ ಸಂಪೂರ್ಣ ಮರುಪಾವತಿಯಾಗುವವರೆಗೆ)	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಸೈಟ್ ನಂ. 28/2, 3242 ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ, ಉತ್ತರದಿಂದ ದಕ್ಷಿಣಕ್ಕೆ: 60 ಅಡಿ, ಎಲ್ಲ ವಿಸ್ತೀರ್ಣ: 1200ಚದರ ಅಡಿಯ ಕಾವೇರಿ ಲೇಔಟ್, ದಾಸರಹಳ್ಳಿ ಹೋಬಳಿ, ದಿಬೂರಹಾಕ್ಹುರಂ ಬೆಂಗಳೂರು ಇಲ್ಲದ್ದು, ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ವಿ ರಾಜಣ್ಣ ರವರಿಗೆ ಸ